

بسم اللهِ الرّحمٰن الرّحيم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **06–05–2022** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللهُ وَحْدَهٗ لَا شَرِيْكَ لَهٗ وَأَشْهَدُ أَنَّ مُحَمَّدًا عَبْدُهٗ وَرَسُوْلُهٗ.

أَمَّا بَعْدُ فَأَعُوْذُ بِاللهِ مِنَ الشَّيْطٰنِ الرَّجِيْمِ۔ بِسْمِ اللهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعٰلَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ اِيَّاكَ نَعْبُدُ وَاِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರ್‌ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಯುದ್ಧ ಕಾರ್ಯಾಚರಣೆಗಾಗಿ ಹಝ್ರ್‌ರತ್ ಅಬೂಬಕರ್(ರ) ಸೈನ್ಯಗಳನ್ನು ಕಳುಹಿಸಿದ ಕುರಿತು ಹಿಂದಿನ ಖುತ್ಬಗಳಲ್ಲಿ ಪ್ರಸ್ತಾಪ ನಡೆಯುತ್ತಿತ್ತು. ಆ ಕಾಲದ ಸ್ಥಿತಿಗತಿಗಳು ಎಷ್ಟು ಕಠಿಣವಾಗಿತ್ತು ಎಂಬುದರ ಅಂದಾಜು ಆಗಲು ಅವುಗಳ ಸ್ವಲ್ಪ ವಿವರವನ್ನು ಪ್ರಸ್ತಾಪಿಸುವೆನು.

**ಹನ್ನೊಂದು ಯುದ್ಧ ಕಾರ್ಯಾಚರಣೆಗಳಲ್ಲಿ ಮೊದಲನೆಯ ಕಾರ್ಯಾಚರಣೆಯ ವಿವರಣೆ:**

ಪ್ರಸ್ತಾಪಿಸಲಾದಂತೆ ಹನ್ನೊಂದು ಯುದ್ಧ ಸೈನ್ಯಗಳನ್ನು ಕಳುಹಿಸಲಾಗಿತ್ತು. ಅದರಲ್ಲಿ ಮೊದಲನೆಯದು ತುಲೈಹ ಬಿನ್ ಖುವೈಲಿದ್, ಮಾಲಿಕ್ ಬಿನ್ ನುವೈರ, ಸುಜಾಹ್ ಬಿನ್ತ್ ಹಾರಿಸ್ ಮತ್ತು ಮುಸೈಲಿಮ ಕದ್ದಾಬ್ ಮುಂತಾದ ದಂಗೆಗಾರರಾದ ಧರ್ಮತ್ಯಾಗಿಗಳು ಮತ್ತು ಸುಳ್ಳುಪ್ರವಾದಿಗಳನ್ನು ಕೊನೆಗೊಳಿಸಲು ಕಳುಹಿಸಲಾಗಿತ್ತು. ಹಝ್ರ್‌ರತ್ ಅಬೂಬಕರ್(ರ) ಒಂದು ಪತಾಕೆಯನ್ನು ಹಝ್ರ್‌ರತ್ ಖಾಲಿದ್ ಬಿನ್ ವಲೀದ್‌ರಿಗೆ ಒಪ್ಪಿಸಿದರು. ತುಲೈಹ ಬಿನ್ ಖುವೈಲಿದ್‌ನನ್ನು ಎದುರಿಸಲು ಹೋಗಲು ಅವರನ್ನು ಆದೇಶಿಸಿದರು. ಅದು ಆದ ನಂತರ ಬುತಾಹ್‌ಗೆ ಹೋಗಿ ಮಾಲಿಕ್ ಬಿನ್ ನುವೈರರೊಂದಿಗೆ ಯುದ್ಧ ಮಾಡಲು ಹೇಳಲಾಯಿತು. ಎಂದರೆ, ಅವರು ಯುದ್ಧ ಮಾಡುವುದಕ್ಕೆ ಮುಂದಾದರೆ ಮಾತ್ರ ಅವರ ವಿರುದ್ಧ ಯುದ್ಧ ಮಾಡಬೇಕೆಂದು ಆದೇಶಿಸಲಾಯಿತು. ಹಝ್ರ್‌ರತ್ ಸಾಬಿತ್ ಬಿನ್ ಖೈಸ್‌ರನ್ನು ಅನ್ಸಾರರ ನೇತಾರರನ್ನಾಗಿ ಹಝ್ರ್‌ರತ್ ಅಬೂಬಕರ್(ರ) ನಿಶ್ಚಯಿಸಿದರು ಎಂಬುವುದಾಗಿ ಒಂದು ವರದಿಯಿದೆ. ಅವರನ್ನು ಹಝ್ರ್‌ರತ್ ಖಾಲಿದ್ ಬಿನ್ ವಲೀದ್‌ರ ಅಧೀನದಲ್ಲಿ ಮಾಡಿಕೊಂಡು ತುಲೈಹ ಮತ್ತು ಉಯೈನ ಬಿನ್ ಹಿಸ್‌ನ್‌ರನ್ನು ಎದುರಿಸಲು ಹೋಗಬೇಕೆಂದು ಹಝ್ರ್‌ರತ್ ಖಾಲಿದ್‌ರಿಗೆ ಆದೇಶ ಕೊಡಲಾಯಿತು. ಅವರು ಬನೂ ಅಸದಿನ ಒಂದು ಚಿಲುಮೆಯಾದ ಬುಝಾಖದ ಬಳಿ ತಂಗಿದ್ದರು.

**ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗ.**

ಧರ್ಮತ್ಯಾಗಿಗಳ ವಿರುದ್ಧ ಯುದ್ಧ ನಡೆಸಲಿಕ್ಕೆ ಖಾಲಿದ್ ಬಿನ್ ವಲೀದ್‌ರಿಗಾಗಿ ಬಾವುಟವನ್ನು ಕಟ್ಟುತ್ತಿದ್ದಾಗ ಹಝ್ರ್‌ರತ್ ಅಬೂಬಕರ್(ರ) ಹೇಳಿದರು: ಖಾಲಿದ್ ಬಿನ್ ವಲೀದ್ ಅಲ್ಲಾಹನ ಅತ್ಯುತ್ತಮ ದಾಸನೆಂದೂ ನಮ್ಮ ಸಹೋದರನೆಂದೂ ಸತ್ಯನಿಷೇಧಿಗಳ ಮತ್ತು ಕಪಟವಿಶ್ವಾಸಿಗಳ ವಿರುದ್ಧ ಎತ್ತಲಾದ ಅಲ್ಲಾಹನ ಖಡ್ಗಗಳಲ್ಲಿ ಒಂದು ಖಡ್ಗವೆಂದೂ ಹಝ್ರ್‌ರತ್ ಪೈಗಂಬರ್(ಸ) ಹೇಳಿದ್ದಾಗಿ ನಾನು ಆಲಿಸಿದ್ದೇನೆ. ಹಾಗೆ ಹಝ್ರ್‌ರತ್ ಖಾಲಿದ್ ಬಿನ್ ವಲೀದ್‌ರನ್ನು ಹಝ್ರ್‌ರತ್ ಅಬೂಬಕರ್(ರ) ತುಲೈಹ ಮತ್ತು ಉಯೈನರ ಕಡೆಗೆ ಕಳುಹಿಸಿದರು. ಈ ಇಬ್ಬರು ವಿರೋಧಿಗಳ ಸಂಕ್ಷೇಪವಾದ ಪರಿಚಯವನ್ನು ಮುಂದಿರಿಸುತ್ತೇನೆ.

**ಕಣಿಹೇಳುವವನಾದ ತುಲೈಹ ಮತ್ತು ಉಯೈನ ಎಂಬೀ ಈರ್ವರು ಎದುರಾಳಿಗಳ ಸಂಕ್ಷೇಪವಾದ ಪರಿಚಯ:**

ತುಲೈಹ ಬಿನ್ ಖುವೈಲಿದ್ ಬಿನ್ ನೌಫಲ್ ಬಿನ್ ನಝ್ಲ ಅಸದಿ ಎಂಬವನು ಸುಳ್ಳುಪ್ರವಾದಿಗಳಲ್ಲಿ ಒಬ್ಬನಾಗಿದ್ದನು. ಆತನು ಹಝ್ರ್‌ರತ್ ಪೈಗಂಬರ್(ಸ)ರ ಪರಿಶುದ್ಧ ಜೀವಿತದ ಕೊನೆಯ ಕಾಲದಲ್ಲಿ ಮುಂದೆ ಬಂದಿದ್ದನು. ಹಝ್ರ್‌ರತ್ ಪೈಗಂಬರ್(ಸ)ರ ಜೀವಿತಕಾಲದಲ್ಲೇ ಆತನು ಧರ್ಮತ್ಯಾಗ ಮಾಡಿ ಸುಳ್ಳುಪ್ರವಾದಿತ್ವ ವಾದವನ್ನು ಮಾಡಿದ್ದನು. ಸಮೀರ ಎಂಬ ಪ್ರದೇಶವನ್ನು ಆತನು ತನ್ನ ಸೇನಾ ಕೇಂದ್ರವನ್ನಾಗಿ ಮಾಡಿದನು.

ಆತನು ಪ್ರವಾದಿತ್ವ ವಾದವನ್ನು ಮಾಡಿದಾಗ ಜನಸಾಮಾನ್ಯರು ಆತನಿಗೆ ವಿಧೇಯರಾದರು. ಜನರು ದಾರಿ ತಪ್ಪಲು ಮೊದಲ ಕಾರಣವೇನೆಂದರೆ, ಆತನು ತನ್ನ ಸಮುದಾಯದೊಂದಿಗೆ ಒಂದು ಯಾತ್ರೆಯಲ್ಲಿದ್ದನು. ನೀರು ಮುಗಿದ ಕಾರಣ ಜನರಿಗೆ ಕಠಿಣವಾದ ಬಾಯಾರಿಕೆಯಾಯಿತು. ಚಾಣಾಕ್ಷತೆಯಿಂದ ಆತನು ಜನರೊಡನೆ ಹೇಳಿದನು: ನೀವು ನನ್ನ ಕುದುರೆಯಾದ ಅಳ್‌ಲಾಲ್‌ನಲ್ಲಿ ಸವಾರರಾಗಿಕೊಂಡು ಕೆಲವು ಮೈಲುಗಳಷ್ಟು ದೂರಕ್ಕೆ ಹೋಗಿರಿ. ಅಲ್ಲಿ ನಿಮಗೆ ನೀರು ಸಿಗುವುದು. ಅವರು ಹಾಗೆಯೇ ಮಾಡಿದರು ಮತ್ತು ಅವರಿಗೆ ನೀರು ಲಭಿಸಿತು. ಈ ಕಾರಣದಿಂದ ಆ ಗ್ರಾಮವಾಸಿಗಳು ಮೋಸಕ್ಕೆ ಒಳಗಾದರು. ಆತನ ಆಧಾರರಹಿತ ಮಾತುಗಳಲ್ಲಿ ಒಂದು ಏನೆಂದರೆ, ಆತನು ನಮಾಝಿನಿಂದ ಸಜದವನ್ನು ಕೊನೆಗೊಳಿಸಿದ್ದನು. ಆಕಾಶದಿಂದ ತನಗೆ ದಿವ್ಯವಾಣಿ ಅವತೀರ್ಣವಾಗುತ್ತದೆ ಎಂದು ಆತನು ಹೇಳುತ್ತಿದ್ದನು. ಕಾವ್ಯಾತ್ಮಕ ಸಾಲುಗಳನ್ನು ತನಗೆ ಲಭಿಸಿದ ದಿವ್ಯವಾಣಿಗಳು ಎಂದು ಹೇಳಿ ಮುಂದಿರಿಸುತ್ತಿದ್ದನು. ಇಸ್ಲಾಮಿಗೆ ಮುಂಚೆ ಕಣಿ ಹೇಳುವವರು ಕಾವ್ಯಾತ್ಮಕ ಸಾಲುಗಳಲ್ಲಿ ವಾಕ್ಯಗಳನ್ನು ಹೇಳಿ ಜನರೊಳಗೆ ಅವರ ಕುರಿತು ಒಂದು ಆದರಭಾವ ಉಂಟುಮಾಡಿಸುತ್ತಿದ್ದರು. ತುಲೈಹ ಕೂಡ ಕಣಿ ಹೇಳುವವನಾಗಿದ್ದನು. ತುಲೈಹ ಅಸದಿಯ ಸ್ವಂತ ಆತ್ಮವು ಆತನನ್ನು ಮೋಸಗೊಳಿಸಿತು.

ಆತನ ವಿಷಯ ಶಕ್ತಗೊಂಡಿತು. ಆತನ ಶಕ್ತಿ ವರ್ಧಿಸಿತು. ಹಝ್ರ್‌ರತ್ ಪೈಗಂಬರ್(ಸ)ರಿಗೆ ಈ ವಿಷಯದ ಸುದ್ದಿ ಮುಟ್ಟಿದಾಗ ಅವರು ಝಿರಾರ್ ಬಿನ್ ಅಝ್ವಾರ್ ಅಸದಿಯನ್ನು ಆತನ ವಿರುದ್ಧ ಯುದ್ಧ ಮಾಡಲು ಕಳುಹಿಸಿದರು. ಆದರೆ ಝಿರಾರರಿಗೆ ಆತನನ್ನು ಎದುರಿಸಲು ಸಾಧ್ಯವಾಗಲಿಲ್ಲ. ಏಕೆಂದರೆ ಸಮಯ ಕಳೆದಂತೆ ಆತನ ಶಕ್ತಿ ವರ್ಧಿಸಿತ್ತು. ಹಝ್ರ್‌ರತ್ ಪೈಗಂಬರ್(ಸ) ನಿಧನರಾದರು. ಆದರೆ ತುಲೈಹನ ಸಮಸ್ಯೆ ಬಗೆಹರಿಯಲಿಲ್ಲ. ಖಿಲಾಫತ್ ಸ್ಥಾನವು

ಹಝ್ರತ್ ಅಬೂಬಕರ್(ರ)ರಿಗೆ ಲಭಿಸಿದಾಗ ದಂಗೆಗಾರರಾದ ಧರ್ಮತ್ಯಾಗಿಗಳನ್ನು ಕೊನೆಗೊಳಿಸಲು ಅವರು ಸೈನ್ಯವನ್ನು ತಯಾರು ಮಾಡಿದರು ಮತ್ತು ನೇತಾರರನ್ನು ನಿಶ್ಚಯಿಸಿದರು. ಆತನ ಕಡೆಗೆ ಹಝ್ರತ್ ಖಾಲಿದ್ ಬಿನ್ ವಲೀದ್(ರ)ರನ್ನು ಸೇನಾಧಿಪತಿಯನ್ನಾಗಿ ಮಾಡಿಕೊಂಡು ಸೈನ್ಯವನ್ನು ಕಳುಹಿಸಿದರು. ಇವರು ಕೇವಲ ಧರ್ಮತ್ಯಾಗಿಗಳೋ ನುಬುವ್ವತ್ ವಾದಿಗಳೋ ಆಗಿರಲಿಲ್ಲ. ಬದಲಾಗಿ ಮುಸ್ಲಿಮರ ವಿರುದ್ಧ ಯುದ್ಧಗಳನ್ನು ಮಾಡುತ್ತಿದ್ದರು. ಮುಸ್ಲಿಮರಿಗೆ ನಷ್ಟ ಉಂಟುಮಾಡಲು ಕೂಡ ಶ್ರಮಿಸುತ್ತಿದ್ದರು.

**ಉಯೈನ ಹಿಸ್ನ್ ಯಾರು?**

ಉಯೈನ ಎಂಬವನು ಮಕ್ಕಾ ವಿಜಯಕ್ಕೆ ಮುಂಚಿತವಾಗಿ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ್ದನು. ಹುನೈನ್ ಮತ್ತು ತಾಯಿಫ್ ಯುದ್ಧದಲ್ಲೂ ಇವನು ಭಾಗವಹಿಸಿದ್ದನು. ಅನಂತರ ಹಝ್ರತ್ ಅಬೂಬಕರ್(ರ)ರ ಖಿಲಾಫತ್ ಕಾಲದಲ್ಲಿ ಧರ್ಮತ್ಯಾಗಿಗಳಾದ ದಂಗೆಗಾರರ ಜೊತೆಗೆ ಧರ್ಮತ್ಯಾಗದ ಪಿತೂರಿಯಲ್ಲಿ ಸಿಲುಕಿಕೊಂಡನು ಮತ್ತು ತುಲೈಹನ ಕಡೆಗೆ ವಾಲಿಕೊಂಡನು. ತುಲೈಹನನ್ನು ಬೈಅತ್ ಮಾಡಿದನು. ಹೀಗಿದ್ದರೂ ಅನಂತರ ಅವನು ಇಸ್ಲಾಮಿನ ಕಡೆಗೆ ಮರಳಿ ಬಂದಿದ್ದನು.

ಅಬಸ್, ಧುಬ್ಯಾನ್ ಮತ್ತು ಅವರ ಸಹಾಯಕರು ಬುಝಾಖ ಎಂಬ ಪ್ರದೇಶದಲ್ಲಿ ಒಟ್ಟುಗೂಡಿದಾಗ, ತೈ ಗೋತ್ರದ ಎರಡು ಶಾಖೆಗಳಾದ ಬನೂ ಜದೀಲ ಮತ್ತು ಗೌಸ್ ಗೋತ್ರದವರೊಡನೆ ಬೇಗನೇ ತನ್ನ ಬಳಿಗೆ ಬರಲು ತುಲೈಹ ಹೇಳಿದನು. ಹೀಗೆ ಅವರು ಬಂದರು. ಖಾಲಿದ್ ಬಿನ್ ವಲೀದ್‌ರನ್ನು ಧುಲ್‌ಖಸ್ಸದಿಂದ ಕಳುಹಿಸುವುದಕ್ಕೆ ಮುಂಚಿತವಾಗಿ ಹಝ್ರತ್ ಅಬೂಬಕರ್(ರ) ಹಝ್ರತ್ ಅದಿ(ರ)ರೊಡನೆ ಹೇಳಿದರು: ನೀವು ನಿಮ್ಮ ಸಮುದಾಯವಾದ ತೈ ಗೋತ್ರದ ಬಳಿಗೆ ಹೋಗಿರಿ. ಅವರು ನಾಶವಾಗುವಂತೆ ಆಗದಿರಲಿ. ಹಾಗೆ ಹಝ್ರತ್ ಅದಿ(ರ) ತನ್ನ ಗೋತ್ರದವರ ಬಳಿಗೆ ಬಂದು ಅವರಿಗೆ ಇಸ್ಲಾಮಿನ ಸಂದೇಶವನ್ನು ನೀಡಿದರು. ಅವರೊಳಗೆ ಭಯ ಹುಟ್ಟಿಸಿದರು. ಆದರೆ ಆ ಗೋತ್ರದವರು ಹೇಳಿದರು: ನಾವು ಅಬುಲ್‌ಫಸೀಲ್‌ರನ್ನು ಖಂಡಿತವಾಗಿಯೂ ಅನುಸರಿಸಲಾರೆವು. (ಕೆಲವು ಜನರು ಹಝ್ರತ್ ಅಬೂಬಕರ್(ರ)ರನ್ನು ನಿಂದಿಸಲಿಕ್ಕಾಗಿ ಅವರನ್ನು ಅಬುಲ್‌ಫಸೀಲ್ ಎಂದು ಕರೆಯುತ್ತಿದ್ದರು. ಅದರ ಅರ್ಥ ಮರಿ ಒಂಟೆಯ ತಂದೆ). ಹಝ್ರತ್ ಅದಿ(ರ) ಅವರಿಗೆ ಮುನ್ನೆಚ್ಚರಿಕೆ ನೀಡಿದರು. ಯಾವುದೇ ದಯೆತೋರಿಸದ ದಾಳಿಗಾರರಾದ ಸೈನ್ಯವು ಬರುವುದರ ಕುರಿತು, ಕೊಲೆ ಮತ್ತು ಕಠಿಣವಾದ ಯುದ್ಧಗಳು ನಡೆಯಲಿರುವುದರ ಕುರಿತು ಮತ್ತು ಯಾರಿಗೂ ಅಭಯ ಸಿಗದೇ ಇರುವುದರ ಕುರಿತು ಅವರಿಗೆ ಮುನ್ನೆಚ್ಚರಿಕೆ ನೀಡಿದ ನಂತರ ಮತ್ತು ಅವರನ್ನು ಮನವರಿಕೆ ಮಾಡಿಸಲು ಪ್ರಯತ್ನಿಸಿದ ನಂತರ ಹಝ್ರತ್ ಅದಿ(ರ) ಹೇಳಿದರು: ಅಂತಹ ಘಟ್ಟ ಬರುವಾಗ ನೀವು ಅಬೂಬಕರ್(ರ)ರನ್ನು ಫಹಲುಲ್ ಅಕ್ಬರ್ ಎಂಬ ಉಪನಾಮದಿಂದ ಕರೆಯುವಿರಿ. (ಎಂದರೆ ಪ್ರತಿ ಜಾನುವಾರಿನ ಅತ್ಯಂತ ಪರಾಕ್ರಮಿಯಾದ ಗಂಡು ತಳಿ ಎಂದು). ತೈ ಗೋತ್ರದವರು ಅವರ ಮಾತುಗಳನ್ನು ಕೇಳಿದ ನಂತರ ಹೇಳಿದರು: ಸರಿ, ದಾಳಿಮಾಡುವ ಆ ಸೈನ್ಯವನ್ನು ನೀವು ಹೋಗಿ ಭೇಟಿಯಾಗಿರಿ ಮತ್ತು ನಮ್ಮ ಮೇಲೆ ಅದು ದಾಳಿ ನಡೆಸುವುದರಿಂದ ತಡೆಯಿರಿ. ಅಷ್ಟರಲ್ಲಿ ನಾವು ಬುಝಾಖದಲ್ಲಿರುವ ನಮ್ಮ ಸಮುದಾಯದ ಜನರನ್ನು ಮರಳಿ ಕರೆಯುವೆವು. ಏಕೆಂದರೆ, ನಮ್ಮ ಜನರು ತುಲೈಹರ ನಿಯಂತ್ರಣದಲ್ಲಿರುವ ಸ್ಥಿತಿಯಲ್ಲಿ ನಾವು ಅವನನ್ನು ವಿರೋಧಿಸಿದರೆ, ಅವನು ಅವರೆಲ್ಲರನ್ನು ಕೊಲ್ಲುವನು ಅಥವಾ ಒತ್ತೆಯಾಳು ಎಂಬ ನೆಲೆಯಲ್ಲಿ ಅವರನ್ನು ಬಂಧಿಸುವನು ಎಂಬ ಭಯ ನಮಗಿದೆ.

ತನ್ನ ತೈ ಗೋತ್ರವು ಪುನಃ ಇಸ್ಲಾಂ ಧರ್ಮವನ್ನು ಸ್ವೀಕಾರ ಮಾಡಿದ ಕುರಿತು ಹಝ್ರತ್ ಅದಿ(ರ) ಹಝ್ರತ್ ಖಾಲಿದ್(ರ)ರಿಗೆ ತಿಳಿಸಿದ ಬಗ್ಗೆ ಮತ್ತು ಮೇಲಿನ ಸ್ಥಿತಿಗತಿಗಳ ಕುರಿತು ಒಬ್ಬ ಲೇಖಕ ಬರೆಯುತ್ತಾರೆ: ಇಸ್ಲಾಮಿನ ಸೈನ್ಯದಲ್ಲಿ ಸೇರ್ಪಡೆಯಾಗಲು ಹಝ್ರತ್ ಅದಿ(ರ) ತನ್ನ ಸಮುದಾಯಕ್ಕೆ ನೀಡಿದ ಆಮಂತ್ರಣವು ಅವರ ಒಂದು ಮಹತ್ತಾದ ಕೆಲಸವಾಗಿದೆ.

ಖಾಲಿದ್(ರ)ರ ಸೈನ್ಯದಲ್ಲಿ ಬನೂ ತೈ ಗೋತ್ರದವರು ಸೇರ್ಪಡೆಯಾದದ್ದು ಎದುರಾಳಿಗಳ ಮೊದಲ ಪರಾಜಯವಾಗಿತ್ತು. ಏಕೆಂದರೆ, ತೈ ಗೋತ್ರವು ಅರೇಬಿಯದ ಅತ್ಯಂತ ಬಲಶಾಲಿ ಗೋತ್ರವಾಗಿ ಗಣಿಸಲ್ಪಡುತ್ತಿತ್ತು. ಮಾತ್ರವಲ್ಲ ಇತರ ಗೋತ್ರಗಳು ಅದಕ್ಕೆ ಪ್ರಾಮುಖ್ಯತೆ ನೀಡುತ್ತಿತ್ತು.

ಅನಂತರ ಹಝ್ರತ್ ಖಾಲಿದ್(ರ) ಜದೀಲ ಗೋತ್ರವನ್ನು ಎದುರಿಸುವ ಉದ್ದೇಶದಿಂದ ಅನ್ಸರ್ ಕಡೆಗೆ ಹೊರಟರು. ಆಗ ಹಝ್ರತ್ ಅದಿ(ರ) ಹಝ್ರತ್ ಖಾಲಿದ್(ರ)ರೊಡನೆ ಹೇಳಿದರು: ತೈ ಗೋತ್ರದ ಉದಾಹರಣೆ ಒಂದು ಪಕ್ಷಿಯಂತಾಗಿದೆ. ಜದೀಲ ಗೋತ್ರವು ಬನೂ ತೈ ಗೋತ್ರದ ಎರಡು ರೆಕ್ಕೆಗಳಲ್ಲಿ ಒಂದು ರೆಕ್ಕೆಯಾಗಿದೆ. ನೀವು ನನಗೆ ಕೆಲವು ದಿನಗಳ ಕಾಲಾವಕಾಶವನ್ನು ಕೊಡಿರಿ. ಯಾವ ರೀತಿಯಲ್ಲಿ ತೈ ಗೋತ್ರದ ಮತ್ತೊಂದು ಶಾಖೆಯಾದ ಗೌಸನ್ನು ಅಲ್ಲಾಹನು ದುರ್ಮಾರ್ಗದಿಂದ ಹೊರಗೆ ತಂದ ರೀತಿಯಲ್ಲೇ ಅಲ್ಲಾಹನು ಬಹುಶಃ ಜದೀಲ ಗೋತ್ರವನ್ನು ಕೂಡ ಸನ್ಮಾರ್ಗದ ಕಡೆಗೆ ತರುವನು. ಹೀಗೆ ಹಝ್ರತ್ ಅದಿ(ರ) ಸತತವಾಗಿ ಮಾತುಕತೆ ನಡೆಸಿದ ಫಲವಾಗಿ ಆ ಗೋತ್ರದವರು ಕೂಡ ಹಝ್ರತ್ ಅದಿ(ರ)ಯ ಕೈಯಲ್ಲಿ ಬೈಅತ್ ಮಾಡಿದರು. ಹಝ್ರತ್ ಅದಿ(ರ) ಜದೀಲ ಗೋತ್ರದ ಒಂದು ಸಾವಿರ ಸವಾರರ ಜೊತೆಗೆ ಮುಸ್ಲಿಮರ ಬಳಿಗೆ ಬಂದರು.

ತೈ ಗೋತ್ರದವರು ಇಸ್ಲಾಂ ಸ್ವೀಕಾರ ಮಾಡಿದ ನಂತರ ಹಝ್ರತ್ ಖಾಲಿದ್ ಬಿನ್ ವಲೀದ್(ರ) ತುಲೈಹ ಅಸದಿಯ ಕಡೆಗೆ ರವಾನೆಯಾದರು. ಅವರು ಹಝ್ರತ್ ಉಖಾಶ ಬಿನ್ ಮಿಹ್‌ಸನ್ ಮತ್ತು ಹಝ್ರತ್ ಸಾಬಿತ್ ಬಿನ್ ಅಖ್‌ರಮ್‌ರನ್ನು ಶತ್ರುಗಳ ಕುರಿತು ಮಾಹಿತಿ ಪಡೆಯಲು ಕಳುಹಿಸಿದರು. ಆದರೆ ಶತ್ರುಗಳು ಅವರಿಬ್ಬರನ್ನೂ ಶಹೀದ್ ಮಾಡಿದರು. ಈ ಸ್ಥಿತಿಯ ಕಾರಣದಿಂದ ತುಲೈಹನನ್ನು ಎದುರಿಸಲು ಹಝ್ರತ್ ಖಾಲಿದ್(ರ) ತನ್ನ ಸೈನ್ಯವನ್ನು ತಯಾರುಮಾಡಲು ಶುರುಮಾಡಿದರು. ಬುಝಾಖದಲ್ಲಿ ಇರುಪಕ್ಷದವರ ಮುಖಾಮುಖಿಯಾಯಿತು ಮತ್ತು ಶತ್ರು ಪಕ್ಷ ಪರಾಜಿತಗೊಂಡಿತು. ತುಲೈಹ ತನ್ನ ಕುದುರೆಯಲ್ಲಿ ಸ್ವತಃ ಸವಾರನಾಗಿ ತನ್ನ ಪತ್ನಿಯನ್ನು ಅದರ ಮೇಲೆ ಸವಾರಿಗೊಳಿಸಿ ಅಲ್ಲಿಂದ ಪರಾರಿಯಾದನು. ತನ್ನ ಜೊತೆಗಿರುವವರೊಡನೆ ಹೀಗೆ ಹೇಳಿದನು: ನಿಮ್ಮಲ್ಲಿ ಪರಾರಿಯಾಗಲು ಸಾಧ್ಯವಿರುವವರು ಯುದ್ಧ ಮೈದಾನದಿಂದ ಓಡಿಹೋಗಿರಿ. ತುಲೈಹ ಯುದ್ಧ ಮೈದಾನದಿಂದ ಓಡಿಹೋಗಿ ನಖದಲ್ಲಿ ಬನೂ ಖಲ್‌ಬಿನ ಬಳಿ ತಂಗಿದನು ಮತ್ತು ಅಲ್ಲಿಗೆ ಹೋಗಿ ಇಸ್ಲಾಂ ಸ್ವೀಕಾರ ಮಾಡಿದನು ಎಂದು ಒಂದು ವರದಿಯಲ್ಲಿ ಬಂದಿದೆ.

ಅನಂತರ ಬನೂ ಫಝ್ಝಾರ ಮತ್ತು ತುಲೈಹರನ್ನು ಅಲ್ಲಾಹನು ಹೀನಾಯವಾಗಿ ಪರಾಜಿತಗೊಳಿಸಿದಾಗ ಬನೂ ಆಮಿರ್, ಸಲೀಂ ಮತ್ತು ಹವಾಝ್ಝುನ್ ಗೋತ್ರದವರು ಹೀಗೆ ಹೇಳುತ್ತಾ ಬಂದರು: 'ಯಾವ ಧರ್ಮದಿಂದ ನಾವು ಹೊರಗೆ ಬಂದೆವೋ ಅದರಲ್ಲಿ ನಾವು ಪುನಃ ಪ್ರವೇಶಿಸುತ್ತೇವೆ.' ಅವರು ಸ್ವತಃ ಬಂದು ಇಸ್ಲಾಮಿಗೆ ಪ್ರವೇಶಿಸಿದರು.

ತಮ್ಮ ಬಳಿಯಲ್ಲಿದ್ದ ಮುಸ್ಲಿಮರನ್ನು ಬೆಂಕಿಯಿಂದ ಸುಟ್ಟ, ಅವರನ್ನು ವಿರೂಪಗೊಳಿಸಿದ ಮತ್ತು ಮುಸ್ಲಿಮರ ಮೇಲೆ ದಾಳಿ ನಡೆಸಿದ ಬನೂ ಆಮಿರ್, ಅಸದ್, ಗಿತ್‌ಫಾನ್, ಹವಾಝಿನ್, ಸುಲೈಮ್ ಮತ್ತು ತೈ ಗೋತ್ರದ ಬಳಿಯಲ್ಲಿದ್ದ ಧರ್ಮತ್ಯಾಗಿಗಳನ್ನು ಮುಸ್ಲಿಮರಿಗೆ ಒಪ್ಪಿಸುವ ತನಕ ಅವರಲ್ಲಿ ಯಾರ ಬೈಅತನ್ನು ಕೂಡ ಹಝ್ರತ್ ಖ಼ಾಲಿದ್ ಸ್ವೀಕಾರ ಮಾಡಲಿಲ್ಲ. ಅವರ ಬಗ್ಗೆಗಿನ ವಿವರಗಳನ್ನು ಹಝ್ರತ್ ಖ಼ಾಲಿದ್(ರ) ಹಝ್ರತ್ ಅಬೂಬಕರ್(ರ)ರಿಗೆ ಬರೆದು ಕಳುಹಿಸಿದರು.

ಅದಕ್ಕೆ ಉತ್ತರವಾಗಿ ಹಝ್ರತ್ ಅಬೂಬಕರ್(ರ) ಹೀಗೆ ಪತ್ರ ಬರೆದರು: ನೀವು ಮಾಡಿದ ಕಾರ್ಯ ಮತ್ತು ನಿಮಗೆ ಲಭಿಸಿದ ವಿಜಯಕ್ಕೂ ಅಲ್ಲಾಹನು ಪ್ರತಿಫಲ ನೀಡಲಿ. ನೀವು ನಿಮ್ಮ ಪ್ರತಿ ಕೆಲಸದಲ್ಲೂ ಅಲ್ಲಾಹನ ಭಯವಿರಿಸಿಕೊಳ್ಳಿರಿ. **ಇನ್ನಲ್ಲಾಹ ಮಅಲ್ಲಧೀನತ್ತಖೌ ವಲ್ಲಧೀನ ಹುಮ್ ಮುಹ್‌ಸಿನೂನ್**. ಖಂಡಿತವಾಗಿಯೂ ಅಲ್ಲಾಹನು ದೇವಭಕ್ತಿಯನ್ನು ತೋರಿಸುವವರ ಮತ್ತು ಔದಾರ್ಯ ಮಾಡುವವರ ಜೊತೆಗೆ ಇರುತ್ತಾನೆ. ನೀವು ಅಲ್ಲಾಹನ ಕೆಲಸದಲ್ಲಿ ಸಂಪೂರ್ಣವಾದ ಪ್ರಯತ್ನವನ್ನು ಮಾಡಿರಿ. ಸೋಮಾರಿಯಾಗದಿರಿ. ಯಾರು ಅಲ್ಲಾಹನ ಆದೇಶವನ್ನು ನಿರಾಕರಿಸಿದರೋ ಮತ್ತು ಯಾರು ಇಸ್ಲಾಮಿನ ಶತ್ರುವಾಗಿರುವರೋ ಅವರನ್ನು ಕೊಲ್ಲುವುದರಿಂದ ಇಸ್ಲಾಮಿಗೆ ಪ್ರಯೋಜನವಿರುವುದಾದರೆ, ಅಂತಹವರನ್ನು ವಧಿಸಿರಿ. ಹಝ್ರತ್ ಖ಼ಾಲಿದ್(ರ) ಒಂದು ತಿಂಗಳ ಕಾಲ ಬುಝ್ಝಾಖ಼ದಲ್ಲಿ ತಂಗಿದರು ಮತ್ತು ಹಝ್ರತ್ ಅಬೂಬಕರ್(ರ)ರ ನಿರ್ದೇಶನದ ಪ್ರಕಾರ ಅಪರಾಧಿಗಳಿಗೆ ಕಠಿಣವಾದ ಶಿಕ್ಷೆಗಳನ್ನು ನೀಡಿದರು.

ಹಝ್ರತ್ ಖ಼ಾಲಿದ್(ರ) ಬನೂ ಆಮಿರರ ಸಮಸ್ಯೆಯನ್ನು ಬಗೆಹರಿಸಿ ಅವರಿಂದ ಬೈಅತ್ ಪಡೆದ ನಂತರ ಉಯ್ಯೈನ ಬಿನ್ ಹಿಸ್ನ್ ಮತ್ತು ಖುರ್ರ ಬಿನ್ ಹವೇರರನ್ನು ಬಂಧಿಸಿ ಹಝ್ರತ್ ಅಬೂಬಕರ್(ರ) ಬಳಿಗೆ ಕಳುಹಿಸಿದರು. ಹಝ್ರತ್ ಅಬೂಬಕರ್(ರ) ಅವರಿಬ್ಬರನ್ನೂ ಕ್ಷಮಿಸಿದರು ಮತ್ತು ಅವರಿಗೆ ಜೀವದಾನ ನೀಡಿದರು.

(ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ) ಝುಫರ್ ಎಂಬ ಪ್ರದೇಶಕ್ಕೆ ಹೋದ ಬಗ್ಗೆ, ಗ಼ತ್‌ಫಾನ್ , ತೈ, ಸುಲೈಂ ಮತ್ತು ಹವಾಝಿನ್ ಗೋತ್ರದ ಕೆಲವರು ಬುಝ್ಝಾಖದಲ್ಲಿ ಹಝ್ರತ್ ಖ಼ಾಲಿದ್ ಬಿನ್ ವಲೀದ್(ರ)ರ ಕೈಯಿಂದ ಪರಾಜಿತಗೊಂಡಾಗ, ಅವರ ಈ ಸೋಲು ಅಭಿಮಾನದ ಪ್ರಶ್ನೆಯಾಗಿದೆ ಎಂದು ಹೇಳಿಕೊಂಡು ಮತ್ತು ಸ್ವತಃ ಬೇರೆ ಬೇರೆ ಗೋತ್ರಗಳಿಗೆ ಹೋಗಿ ಅವರನ್ನು ಯುದ್ದಕ್ಕಾಗಿ ಉಮ್ಮೇ ಝಿಮಲ್ ಬಿನ್ತ್ ಮಾಲಿಕ್ ಬಿನ್ತ್ ಹುಧೈಫ ಎಂಬ ಮಹಿಳೆ ಪ್ರೇರೇಪಿಸಿದ ಬಗ್ಗೆ, ಅವರೊಂದಿಗೆ ಅತ್ಯಂತ ಘೋರವಾದ ಯುದ್ಧ ನಡೆದ ಬಗ್ಗೆ, ಉಮ್ಮೇ ಝಿಮಲಿನ ಕೊಲೆ, ಉಳಿದ ಜನರು ಹುಚ್ಚರಂತಾಗಿ ಪರಾರಿಯಾದ ಬಗ್ಗೆ ವಿವರಣೆಗಳನ್ನು ನೀಡಿದ ನಂತರ ಹುಝ್ಝೂರ್ ಹೇಳಿದರು:) ಹೀಗೆ ಈ ಪಿತೂರಿಯ ಬೆಂಕಿ ತಣ್ಣಗಾಯಿತು. ಅರಬ್ ದೇಶದ ಉತ್ತರಪೂರ್ವ ಭಾಗದಲ್ಲಿ ಧರ್ಮತ್ಯಾಗ ಮತ್ತು ದಂಗೆ ಕೊನೆಗೊಂಡಿತು. ಹಝ್ರತ್ ಅಬೂಬಕರ್(ರ)ರ ಪ್ರಸ್ತಾಪ ಮುಂದುವರೆಯುವುದು.

(ಖುತ್ಬ ಸಾನಿಯಕ್ಕೆ ಮುಂಚಿತವಾಗಿ ಸಿಯಾಲ್‌ಕೋಟಿನ ಸನ್ಮಾನ್ಯ ರಫೀಕ್ ಅಹ್ಮದ್ ಬಟ್ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸಾಬಿರ ಬೇಗಂ ಮತ್ತು ಕೆನಡದ ಸನ್ಮಾನ್ಯ ರಶೀದ್ ಬಾಜ್ವ ಸಾಹಿಬ್‌ರ ಪತ್ನಿಯಾದ ಸನ್ಮಾನ್ಯ ಸುರಯ್ಯ ರಶೀದ್‌ರ ಬಗ್ಗೆ ಪ್ರಸ್ತಾಪಿಸಿ ಅವರ ಜನಾಝ಼ ಗಾಇಬ್ ನಿರ್ವಹಿಸುವುದಾಗಿ ಹೇಳಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ
مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ
فَلَا هَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ
عِبَادَ اللّٰهِ رَحِمَكُمُ اللّٰهُ اِنَّ اللّٰهَ يَأْمُرُ بِالْعَدْلِ وَالْاِحْسَانِ وَاِيْتَآءِ ذِي الْقُرْبٰى
وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ
يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ۔


***Friday Sermon delivered by Hadrath Khaleefatul Masih Al Khamis(atba)***

*At, Masjid Mubarak, Islamabad, Tilford, UK, On 06-05-2022*

**Summarized by** *Majlis Ansarullah Bharat*

***Kannada Translation**:* Moulavi Inamullah for Kannada Desk, Qadian

***Reviewed by**:* M.P Ibrahim |***Layout**:* U Basheer Ahmad

***Published By**:* Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon